Mr. SPEAKER.—As early as Possible

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಿಯಮ ೩೫೪ರ ವ್ಯಾಪ್ತಿಯಲ್ಲಿರತಕ್ಕ ವಿಷಯಗಳಿಗೆ ಗೊತ್ತಿದ್ದರೆ ಕೂಡಲೇ ಹೇಳಬಹುದು ಗೊತ್ತಿಲ್ಲದೇ ಇದ್ದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ಉತ್ತರವನ್ನು ತರಿಸಿ ಹೇಳಬೇಕಾಗುತ್ತದೆ. ಮಧ್ಯಾಹ್ನ, ಸಾಯಂಕಾಲ ದೊಳಗೇ ಹೇಳಿ ಅಂದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ಇದಕ್ಕೆ ಒಂದು ಕಾಲ ಇರಲೇ ಬೇಕು. ಇಲ್ಲದೇ ಹೋದರೆ ಹೇಗೆ ೫ ವರ್ಷದೊಳಗೆ ತರಿಸಿ ಹೇಳುತ್ತೀರಾ ?

ಅಧ್ಯಕ್ಷರು.—ಬಿಹಾರ ರಾಜ್ಯದಲ್ಲಿ ೧೫ ದಿವಸದಲ್ಲಿ ಉತ್ತರ ಕೊಡಬೇಕೆಂದು ಇದೆ ಇಲ್ಲಿ ಕನಿಷ್ಟ ಮೂರು ದಿವಸದೊಳಗೆ ತರಿಸಿಕೊಡುವಂಥ ವ್ಯವಸ್ಥೆಯಾದರೂ ಇರಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇವತ್ತು ನಾವು ವಿಜ್ಞಾನ ಯುಗ, ಆಧುನಿಕ ಯುಗದಲ್ಲಿದ್ದೇವೆ. ಒಂದು ಟೆಲಿಫೋನ್, ಒಂದು ಟ್ರಂಕಾಲ್ ಮಾಡಿದರೆ, ೫–೧೦ ನಿಮಿಷದಲ್ಲಿ ಜಿಲ್ಲಾಧಿಕಾರಿಯವರಿಗೆ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಹೋಗುತ್ತೆ ಇವತ್ತು ಸುದ್ದಿ ಕೊಟ್ಟರೆ, ಸಾಯಂಕಾಲ ಅಥವಾ ನಾಳೆ ಪರದಿಗಳನ್ನು ತರಿಸುವುದಕ್ಕೆ ಅನುಕೂಲವಾಗುತ್ತದೆ. ನಮಗೆ ನಾಡಿದ್ದು ಕೊನೆಯ ದಿವಸ, ಸದನ ಮುಗಿಸುವುದರೊಳಗೆ ಮಾನ್ಯ ಸದಸ್ಯರುಗಳಿಗೆ ಸರ್ಕಾರದವರ ಉತ್ತರ ದೊರಕಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಕನಿಷ್ಟ ಮಾನ್ಯ ಸದಸ್ಯರ ಊರುಗಳಿಗೆ ಉತ್ತರ ತಲುಪಿಸುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಬಿಹಾರ ಶಾಸನ ಸಭೆಯ ವಿಷಯ ತಡವಾಗಿ ಇಟ್ಟು ಕೊಳ್ಳೋಣ, ಉತ್ತರ ತರಿಸುವುದಕ್ಕೆ ಸರ್ಕಾರದವರಿಗೆ ಅನುಕೂಲಗಳು ಇವೆ. ತಾವು ಸರ್ಕಾರದವರಿಗೆ ಸೂಚನೆ ಕೊಟ್ಟು ಶನಿವಾರದೊಳಗೆ ಉತ್ತರ ತರಿಸಬೇಕು ನಿಮ್ಮ ಫೋನು ವೈರ್‌ಲೆಸ್ ಮೆಸೇಜ್ ಮಲಗಿದ್ದಾವೇನೂ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಟೆಲಿಫೋನ್ ಬಗ್ಗೆ ಮಾತನಾಡಿದರು, ನಮ್ಮ ಮನೆಯಿಂದ ನಿಮ್ಮ ಮನೆಗೆ ಫೋನ್ ಮಾಡುವುದಕ್ಕೆ ಮೂರು ದಿವಸ ಬೇಕಾಗುತ್ತದೆ ಈ ಇಲಾಖೆ ಯಾರಿಗೆ ಸೇರಿದ್ದೋ, ಯಾರು ನಡೆಸುತ್ತಾರೋ ಗೊತ್ತಿಲ್ಲ. ಅದಕ್ಕಿಂತ ಶೀಘ್ರವಾಗಿ ಯಾರನ್ನಾದರೂ ಕಳುಹಿಸಿ ತರಿಸಿಕೊಡುತ್ತೇವೆ. ಆಧುನಿಕ ಯುಗದಲ್ಲಿ ಇವುಗಳನ್ನೆಲ್ಲಾ ಉಪಯೋಗಿಸಿ ತರಿಸುವುದಕ್ಕೆ ಕೆಲವು ಸಮಯ ಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಮನೆಯಲ್ಲಿ ಎರಡು ಟೆಲಿಫೋನ್‌ಗಳು ಇವೆ. ನೀವು ನನಗೆ ಟೆಲಿಫೋನ್ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ ನೀವು ಮಲಗುವುದರ ಜೊತೆಗೆ ವೈರ್‌ಲೆಸ್ ಸೆಟ್ಟುಗಳನ್ನು ಮಲಗಿಸಿದ್ದೀರಿ.

xiii ಹೊಸದುರ್ಗ ಜನರಲ್ ಆಸ್ಪತ್ರೆಗೆ ಬೇಕಾಗುವ ಎಲ್ಲಾ ವಿಧವಾದ ಸಾಧನ ಸಾಮಗ್ರಿಗಳನ್ನು ಒದಗಿಸಿ ಕೊಡುವ ಬಗ್ಗೆ.

ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನಲ್ಲಿ ೧೯೮೨ರಲ್ಲಿ ಜನರಲ್ ಆಸ್ಪತ್ರೆ ಮಂಜೂರಾಯಿತು. ಜನರಲ್ ಆಸ್ಪತ್ರೆ ಬರುವುದಕ್ಕೆ ಮುಂಚೆ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿತ್ತು. ಜನರಲ್ ಆಸ್ಪತ್ರೆಯ ಎಲ್ಲಾ ವಿಧವಾದ ಸಾಧನ ಸಾಮಗ್ರಿಗಳನ್ನು ಕೆಂಚಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರವಾನೆ ಮಾಡಿದ್ದಾರೆ. ಆಸ್ಪತ್ರೆಗೆ ಬೇಕಾದ ಸಾಧನ ಸಾಮಗ್ರಿಗಳನ್ನು ಕೊಳ್ಳಲು ೭೦,೦೦೦ ಮಂಜೂರು ಆಗಿದ್ದರೂ ಇದುವರೆಗೂ ಕೊಂಡಿಲ್ಲ ಆ ಭಾಗದ ಬಡ ಜನತೆಗೆ ಆಸ್ಪತ್ರೆಯ ಸೌಲಭ್ಯ ಇಲ್ಲದೇ ಬಹಳ ತೊಂದರೆ ಪಡುತ್ತಿದ್ದಾರೆ. ಸರ್ಕಾರದವರು ಈಗಲಾದರೂ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೆ ಎಂದು ಕೇಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).—ಸ್ವಾಮಿ, ಈ ವಿಚಾರದಲ್ಲಿ ವಿವರಗಳನ್ನು ತರಿಸಿಕೊಂಡು ಆಸ್ಪತ್ರೆಗೆ ಬೇಕಾದ ಸಾಧನ ಸಾಮಗ್ರಿಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

xiv ಬಿಜಾಪುರ ಜಿಲ್ಲೆಯಲ್ಲಿ ಬೆಂಕಿ ಬಿದ್ದವರಿಗೆ 11 ಮನೆಗಳಿಗೆ ಪರಿಹಾರವನ್ನು ತಕ್ಷಣ ಒದಗಿಸುವ ಬಗ್ಗೆ.

ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಸ್ವಾಮಿ, ಬಿಜಾಪುರ ಜಿಲ್ಲೆಯಲ್ಲಿ ೧೧ ಮನೆಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಕಷ್ಟನಷ್ಟಕ್ಕೆ ಒಳಗಾಗಿದ್ದಾರೆ. ಇದುವರೆವಿಗೂ ಸಂಬಂಧಪಟ್ಟ ಅಧಿಕಾರಿಗಳಾಗಲೀ, ಸರ್ಕಾರವಾಗಲೀ ನೊಂದವರಿಗೆ ಪರಿಹಾರ ನೀಡಿಲ್ಲ. ಇದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮನೆಗಳಿಗೆ ಬೆಂಕಿ ಬಿದ್ದು ನಷ್ಟಕ್ಕೊಳಗಾದ ಸಂದರ್ಭದಲ್ಲಿ ಪರಿಹಾರ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಲಾಗಿದೆ. ಮಾನ್ಯ ಸದಸ್ಯರು ಅವರ ಪತ್ರಿರ ಇರತಕ್ಕ ವಿವರಗಳನ್ನು ಕಳುಹಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

xv ಕೊಳ್ಳೇಗಾಲದಲ್ಲಿ ಕಂಷ್ಟರೋಗ ತರಬೇತಿ ಕೇಂದ್ರ

ಶ್ರೀ ಬಿ. ರಾಜಂಗೌಡ (ಹಾನೂರು).—ಸ್ವಾಮಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಂಷ್ಟರೋಗ ನಿವಾರಣಾ ಕೇಂದ್ರ ಆಸ್ತಿತ್ವಕ್ಕೆ ಬಂದು ಎರಡು ವರ್ಷಗಳಾಗಿದ್ದರೂ ಯಾವ ಕಾರ್ಯವನ್ನೂ ಮಾಡು ತ್ತಿಲ್ಲ ಸೂಪರ್‌ವೈಸರ್ ಸೇವೆಯನ್ನು ಎರವಲು ಮೇಲೆ ಪಡೆದಿದ್ದಾರೆ. ಅಲ್ಲಿಗೆ ಸೂಕ್ತ ಸಿಬ್ಬಂದಿಯನ್ನು ಹಾಕಿ ಕುಷ್ಠ ರೋಗ ನಿವಾರಣಾ ಕೇಂದ್ರ ಸರಿಯಾಗಿ ನಡೆಯುವ ಹಾಗೆ ಮಾಡುತ್ತೀರಾ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಯಾವ ಕಾರಣದಿಂದ ಕೆಲಸ ಪ್ರಾರಂಭ ವಾಗಿಲ್ಲವೋ ಗೊತ್ತಿಲ್ಲ. ಕೇಂದ್ರ ಸರ್ಕಾರವು ಕೂಡ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ಸೂಚನೆ ನೀಡಿರುವುದರಿಂದ ಜೊತೆಗೆ ಒಂದು ಜೀಪ್ ಕೂಡ ಕೊಡುವುದರಿಂದ ಆದಷ್ಟು ಜಾಗ್ರತೆ ಸಿಬ್ಬಂದಿಯನ್ನು ನೇಮಕ ಮಾಡಿಸಿ ಕುಷ್ಠರೋಗ ಕೇಂದ್ರ ಕೆಲಸ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮಲ್ಟಿ ಡ್ರಗ್ ಟ್ರೀಟ್‌ಮೆಂಟ್ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

xvi ಸೇಡಂನಲ್ಲಿ ರಾಜೇಶ್ವರಿ ಸಿಮೆಂಟ್ ಕಾರ್ಖಾನೆಯಲ್ಲಿ ಕಾರ್ಮಿಕರೊಬ್ಬರಿಗೆ ಪರಿಹಾರ

ಶ್ರೀ ಚಂದ್ರಶೇಖರ ರೆಡ್ಡಿ ಡಿ. ಎಂ. (ಸೇಡಂ).—ನಮ್ಮ ಕ್ಷೇತ್ರದಲ್ಲಿ ಸಿಮೆಂಟ್ ಫ್ಯಾಕ್ಟರಿಯೊಂದು ಇದೆ. ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರೊಬ್ಬರು ಸಂಬಂಧಪಟ್ಟ ಇಂಜಿನಿಯರ್ ರವರ ಬೇಜವಾಬ್ದಾರಿಯಿಂದ ಕೈ ಕಳೆದುಕೊಂಡಿದ್ದಾರೆ. ಅವನ ಮುಂದಿನ ಜೀವನಕ್ಕೆ ಆಧಾರವೇನು ? ಈ ಬಗ್ಗೆ ಕಾರ್ಮಿಕ ಮಂತ್ರಿಗಳು ಯಾವ ಕ್ರಮ ಕೈಗೊಳ್ಳುತ್ತಾರೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಮಂಜುನಾಥ (ಮಾನ್ಯ ಕಾರ್ಮಿಕ ಮಂತ್ರಿಗಳು).—ಸ್ವಾಮಿ ನಿನ್ನೆಯ ದಿವಸ ಪತ್ರ ಬಂದಿದೆ ವಿವರಗಳನ್ನು ತರಿಸಿ ಉತ್ತರ ಕೊಡುತ್ತೇನೆ.

xvii ಕುಂದಾಪುರ ತಾಲ್ಲೂಕಿನ ಬೆಳೆಗೆ ನೀರಿಲ್ಲದೇ ಇರುವುದರಿಂದ ಚಕ್ರಾ ನದಿಯಂ ನೀರನ್ನು ಬಿಡುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೆಳಂದೂರು).—ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಸಾವಿರಾರು ಎಕರೆ ಜಮೀನಿನಲ್ಲಿರತಕ್ಕ ಬೆಳೆಗೆ ನೀರಿಲ್ಲದೆ ಹಾಳಾಗಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಚಕ್ರಾ ನದಿಯ ನೀರನ್ನು ತಾತ್ಕಾಲಿಕವಾಗಿ ಕೊಡುವ ವ್ಯವಸ್ಥೆಯಿದ್ದರೂ ಕೊಟ್ಟಿಲ್ಲ, ಲಿಂಗನಮಕ್ಕಿ ಆಣೆಕಟ್ಟಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಅಡ್ಡಗಟ್ಟಿ ಕಟ್ಟಿ ನೀರನ್ನು ಕೊಡಲಾಗುತ್ತಿತ್ತು. ಕುಂದಾಪುರ ತಾಲ್ಲೂಕಿಗೆ ನೀರಂ